## ವಿಶ್ವ ಧರ್ಮಸಂಸತ್ತಿನ ಘೋಷಣೆ

ವಿನಾಶದಿಂದ ಪಾರಾಗಬೇಕಾದರೆ ಇಡೀ ಜಗತ್ತು ಧಾರ್ಮಿಕ ಮೌಲ್ಯಗಳ ಚಿರಂತನತೆಯನ್ನು ಅಂಗೀಕರಿಸಲೇಬೇಕಾಗುತ್ತದೆ. ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸದ ಶತಮಾನೋತ್ಸವ ಸಂದರ್ಭದಲ್ಲಿ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಂಸತ್ತಿನ ಉದ್ಘಾಟನೆಯ ಸಂದರ್ಭದಲ್ಲಿ (೪.೯.೧೯೯೩) ಮಾಡಲಾದ ಘೋಷಣೆಯಲ್ಲಿ ನಿರ್ದಿಷ್ಟವಾದದ್ದು ಈ ಆಶಯವೇ. ಜಗತ್ತಿನ ವಿವಿಧ ಮತ ಪಂಥಗಳ ೧೬೦ ಜನಪ್ರತಿನಿಧಿಗಳು ಸಹಿ ಮಾಡಿದ್ದ ಆ ಘೋಷಣೆಯಲ್ಲಿ ಸನಾತನ ಧರ್ಮದ ಚಿರಂತನ ಮೌಲ್ಯಗಳೇ ಉಲ್ಲೇಖಗೊಂಡಿವೆ ಎನ್ನುವುದು ವಿಶೇಷ. ಆ ಘೋಷಣೆ ಹೀಗಿದೆ (ಪುಟ ೩೨ ನೋಡಿ).

## ಚಿರಂತನ ಮೌಲ್ಯಗಳು

ಮೇಲಣ ವಿಶ್ವಸಾರ್ವತ್ರಿಕ ನೀತಿಸಂಹಿತೆಯಲ್ಲಿ ಅಡಕವಾಗಿರುವ ಮೌಲ್ಯಗಳಿಗೂ, 'ಧರ್ಮ' ಎಂಬ ಪರಿಭಾಷೆಯಲ್ಲಿ ಅಡಕವಾಗಿರುವ ಕಟ್ಟಳೆಗಳಿಗೂ ಎಷ್ಟುಮಾತ್ರವೂ ಭೇದವಿಲ್ಲವೆಂದು ನಾವು ಗಮನಿಸಬಹುದು. ಈ ಚಿರಂತನ ಮೌಲ್ಯಗಳನ್ನು ಕೆಳಗೆ ಸೂತ್ರಗಳ ರೂಪದಲ್ಲಿ ಸಂಗ್ರಹಿಸಲಾಗಿದೆ.

**೧. ಆತ್ಮವತ್ ಸರ್ವಭೂತೇಷು**

ನಮ್ಮ ಬಗ್ಗೆ ಇತರರು ಹೇಗೆ ಇರಬೇಕೆಂದು ನಾವು ಬಯಸುತ್ತೇವೋ ಅದರಂತೆ ಇತರರ ವಿಷಯದಲ್ಲಿಯೂ ನಡೆದುಕೊಳ್ಳಬೇಕು.

**೨. ವಸುಧೈವ ಕುಟುಂಬಕಮ್**

ಇಡೀ ಮಾನವತೆಯನ್ನು ಒಂದೇ ಕುಟುಂಬವೆಂದು ನಾವು ಪರಿಗಣಿಸುತ್ತೇವೆ.

**೩. ಏತಂ ಸಾಮಾಸಿಕಂ ಧರ್ಮಮ್** – ಇದೇ ಸಾಮಾನ್ಯ ಧರ್ಮ.

ಅ. **ಪರೋಪಕಾರಾರ್ಥಮಿದಂ ಶರೀರಮ್**
ನಾವು ಇತರರಿಗೆ ಉಪಕಾರ ಮಾಡಬೇಕು.

ಆ. **ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯನಿಗ್ರಹಃ**
ಅಹಿಂಸೆಗೆ ಬದ್ಧರಾಗಿರಬೇಕು, ಸತ್ಯಕ್ಕೆ ನಿಷ್ಠರಾಗಿರಬೇಕು. ಕಳ್ಳತನದಿಂದ ದೂರವಿರೋಣ. ಆಂತರಿಕ ಮತ್ತು ಬಾಹ್ಯ ಪರಿಶುದ್ಧತೆಯನ್ನು ಪಾಲಿಸೋಣ, ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳೋಣ.

ಇ. **ಪರಿತ್ಯಜೇದರ್ಥಕಾಮೌ ಯೌ ಸ್ಯಾತಾಂ ಧರ್ಮವರ್ಜಿತೌ**
ಧನಲೋಭಗಳಿಂದ ಅತೀತರಾಗಿರಬೇಕು. ದುರಾಸೆ, ಅಧಿಕಾರಾಕಾಂಕ್ಷೆ, ಪ್ರತಿಷ್ಠಾಕಾಮನೆ ಮತ್ತು ಲೈಂಗಿಕ ದುರಾಚರಣೆಗಳಲ್ಲಿ ತೊಡಗಬಾರದು.

ಐದು ಸಾವಿರ ವರ್ಷಗಳ ಹಿಂದೆ 'ಧರ್ಮ' ಎಂದು ಮಹಾಭಾರತ ನಿರೂಪಿಸಿದುದು ಈ ಮೌಲ್ಯಗಳನ್ನೇ :

**ಅಕ್ರೋಧಃ ಸತ್ಯವಚನಂ ಸಂವಿಭಾಗಃ ಕ್ಷಮಾ ತಥಾ**
**ಪ್ರಜನಃ ಸ್ವೇಷು ದಾರೇಷು ಶೌಚಮದ್ರೋಹ ಏವ ಚ ।**
**ಆರ್ಜವಂ ಭೃತ್ಯಭರಣಂ ನವೈತೇ ಸಾರ್ವವರ್ಣಿಕಾಃ ॥**

(ಶಾಂತಿಪರ್ವ, ೬೦ : ೭–೮)

"ಸತ್ಯವಂತಿಕೆ, ಕೋಪದಿಂದ ಮುಕ್ತರಾಗಿರುವುದು, ಧನವನ್ನು ಇತರರೊಡನೆ ಹಂಚಿಕೊಳ್ಳುವುದು, ಕ್ಷಮಾಗುಣ, ಸ್ವಪತ್ನಿಯಲ್ಲಿ ಅಚಲನಿಷ್ಠೆ, ಶುದ್ಧ ನಡವಳಿಕೆ, ದ್ವೇಷರಾಹಿತ್ಯ, ನೇರ ನಡೆ, ನಮ್ಮನ್ನು ಅವಲಂಬಿಸಿದವರ ಪೋಷಣೆ – ಈ ಒಂಬತ್ತು ಧರ್ಮ ನಿಯಮಗಳು ಎಲ್ಲ ವರ್ಣಗಳವರಿಗೂ ಅನುಸರಣೀಯವಾದುವು."

ಇದಲ್ಲದೆ ಗುರುಕುಲದಲ್ಲಿ ವ್ಯಾಸಂಗ ಮುಗಿಸಿದ ಸ್ನಾತಕರಿಗೆ ನೀಡಲಾಗುತ್ತಿದ್ದ **'ಮಾತೃದೇವೋ ಭವ'** (ತಾಯಿಯೇ ನಿನಗೆ ದೇವರಾಗಲಿ), **'ಪಿತೃದೇವೋ ಭವ'** (ತಂದೆಯೇ ನಿನಗೆ ದೇವರಾಗಲಿ), **'ಆಚಾರ್ಯದೇವೋ ಭವ'** (ಗುರುಗಳು ನಿನಗೆ ದೇವರಾಗಲಿ) **'ಯಾನಿ ಅನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ, ನೋ ಇತರಾಣಿ'** (ಯಾವ ಕರ್ಮಗಳು ನಿಂದನೀಯವಲ್ಲವೋ ಅವುಗಳನ್ನು ಮಾತ್ರ ಸೇವಿಸಬೇಕು, ಬೇರೆಯವನ್ನಲ್ಲ) ಇತ್ಯಾದಿ ಬೋಧನೆಗಳೂ (ತೈತ್ತಿರೀಯೋಪನಿಷತ್, ಶೀಕ್ಷಾವಲ್ಲೀ) ಪ್ರಸಿದ್ಧವಾದುವು.

ಧರ್ಮವೆಂಬ ಪರಿಭಾಷೆಯಲ್ಲಿ ಅಡಕವಾದ ಈ ಸಾರ್ವತ್ರಿಕ ಮೌಲ್ಯಗಳನ್ನು ವಿಶ್ವಸಂಸ್ಥೆಯೂ **'ವಿಶ್ವಸಾರ್ವತ್ರಿಕ ನೀತಿಸಂಹಿತೆ'** ಎಂದು ಘೋಷಿಸಿ, ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯಗಳವರೆಗೆ ವಿವಿಧ ಸ್ತರಗಳಲ್ಲಿ ಅವುಗಳ ಬಗ್ಗೆ ಶಿಕ್ಷಣ ನಡೆಯುವಂತೆ ವಿಧಿಸಬೇಕು. ಇದೀಗ ಪ್ರಚಲಿತವಾಗಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳ ಮುಖ್ಯ ಭಾಗವಾಗಿರಬೇಕಾದುದು ಇದೇ.

ವ್ಯಕ್ತಿಚಾರಿತ್ರ್ಯ ಉತ್ತಮಗೊಂಡು ಸರಳ ಮತ್ತು ಹೆಚ್ಚಿನ ಗುಣಮಟ್ಟದ ಕೌಟುಂಬಿಕ ಜೀವನ ಏರ್ಪಡಬೇಕಾದರೆ ೨೧ನೇ ಶತಮಾನದ ಶಿಕ್ಷಣಪ್ರಕಾರದಲ್ಲಿ ಈ ಮೌಲ್ಯಗಳು ಸೇರ್ಪಡೆಯಾಗಲೇಬೇಕು. ಹಾಗೆ ಆದಾಗ ಮಾತ್ರ ರಾಷ್ಟ್ರಜೀವನವೂ ಉತ್ತಮಗೊಂಡೀತು, ಪರಿಸರ ಸಮತೋಲನ ಉಳಿದೀತು, ಮಾನವತೆ ನೆಮ್ಮದಿಗೊಂಡೀತು. ಜಗತ್ತಿನ ಈಗಿನ ಎಲ್ಲ ಸಮಸ್ಯೆಗಳಿಗೆ ದೀರ್ಘಾವಧಿ ಪರಿಹಾರವಾಗಬಲ್ಲದ್ದು ಕೆಳಗಿನ ಸೂತ್ರವೇ:

**ಲೋಕಾಃ ಸಮಸ್ತಾಃ ಸುಖಿನೋ ಭವಂತು**
"ಜಗತ್ತಿನ ಎಲ್ಲರೂ ಸುಖಿಗಳಾಗಿರಲಿ."

## ಉಳಿಯುವುದು ಧರ್ಮವೊಂದೇ

ಕಡೆಯದಾಗಿ ಒಬ್ಬ ವ್ಯಕ್ತಿಯೊಡನೆ ಉಳಿಯುವುದು ಅವನು ತನ್ನ ಜೀವಿತಾವಧಿಯಲ್ಲಿ ಆಚರಿಸಿದ ಧರ್ಮ ಮಾತ್ರ; ಬೇರಾವುದೂ, ಬೇರಾರೂ ಉಳಿಯುವುದಿಲ್ಲ. ಆದ್ದರಿಂದ ದೈನಂದಿನ ಜೀವನದಲ್ಲಿ ಪ್ರತಿಯೊಬ್ಬನೂ ಧರ್ಮಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು. ಇದನ್ನೇ ಮನುಸ್ಮೃತಿ ಹೇಳಿರುವುದು:

**ನಾಮುತ್ರ ಹಿ ಸಹಾಯಾರ್ಥಂ ಪಿತಾ ಮಾತಾ ಚ ತಿಷ್ಠತಃ ।**
**ನ ಪುತ್ರದಾರಂ ನ ಜ್ಞಾತಿಃ ಧರ್ಮಸ್ತಿಷ್ಠತಿ ಕೇವಲಃ ॥**
**ಏಕಂ ಪ್ರಜಾಯತೇ ಜಂತುಃ ಏಕ ಏವ ಪ್ರಲೀಯತೇ ।**
**ಏಕೋಽನುಭುಂಕ್ತೇ ಸುಕೃತಂ ಏಕ ಏವ ಚ ದುಷ್ಕೃತಮ್ ॥**

(ಮನು, ೪: ೨೩೯–೨೪೦)

"ವ್ಯಕ್ತಿಯು ಈ ಜಗತ್ತನ್ನು ಬಿಟ್ಟು ಲೋಕಾಂತರಕ್ಕೆ ಹೋಗುವಾಗ ಅವನ ಸಂಗಡ ತಂದೆ, ತಾಯಿ, ಮಗ, ಹೆಂಡತಿ, ಬಂಧುಗಳು

ಯಾರೂ ಇರುವುದಿಲ್ಲ. ಸತ್ತನಂತರವೂ ಅವನೊಡನಿರುವುದು ಅವನು ಬದುಕಿದ್ದಾಗ ಆಚರಿಸಿದ ಧರ್ಮ ಮಾತ್ರ."

"ಒಬ್ಬ ವ್ಯಕ್ತಿ ಹುಟ್ಟುವುದು ಏಕಾಕಿಯಾಗಿ; ನಿರ್ಗಮಿಸುವುದೂ ಏಕಾಕಿಯಾಗಿಯೇ. ತಾನು ಮಾಡಿದ ಸತ್ಕಾರ್ಯಗಳ ಹಾಗೂ ದುಷ್ಕಾರ್ಯಗಳ ಫಲವನ್ನು ಅನುಭವಿಸುವವನು ಅವನು ಮಾತ್ರ."

**ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಕ್ಷಿತೌ ।**
**ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥**
**ತಸ್ಮಾದ್ಧರ್ಮಂ ಸಹಾಯಾರ್ಥಂ ನಿತ್ಯಂ ಸಂಚಿನುಯಾಚ್ಛನೈಃ ।**
**ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಮ್ ॥**
(ಮನು, ೪; ೨೪೧-೨೪೨)

"ವ್ಯಕ್ತಿಯು ಸತ್ತೊಡನೆ ಬಂಧುಗಳು ಅವನ ಶರೀರವನ್ನು ಸುಟ್ಟುಹಾಕಿ ತಮ್ಮ ಪಾಡಿಗೆ ತಾವು ಮನೆಗೆ ಮರಳುತ್ತಾರೆ. ಅವನೊಡನೆ ಉಳಿಯುವುದು ಅವನು ಮಾಡಿದ್ದ ಧರ್ಮ ಮಾತ್ರ. ಆದ್ದರಿಂದ ಮನುಷ್ಯನು ಸದಾ ಧರ್ಮಕ್ಕೆ ಅನುಗುಣವಾಗಿ ಬಾಳಬೇಕು. ಹಾಗೆ ಮಾಡಿದವನು ಮಾತ್ರ ಧರ್ಮದ ಸಹಾಯದಿಂದ ಘೋರ ಅಂಧಕಾರವನ್ನು ದಾಟುತ್ತಾನೆ."

ಧರ್ಮದ ಅನುಸರಣೆಯು ಒಬ್ಬ ವ್ಯಕ್ತಿಯ ಪ್ರಗತಿಗೆ ಮಾತ್ರವಲ್ಲದೆ ಅವನ ಕುಟುಂಬದ ಮತ್ತು ಇಡೀ ಸಮಾಜದ ಕಲ್ಯಾಣಕ್ಕೂ ಅನಿವಾರ್ಯ.

ಯಾರೂ ಇತರರಿಗೆ ತೊಂದರೆ ಮಾಡಬಾರದು, ಇತರರನ್ನು ಶೋಷಿಸಬಾರದು. ಪುಣ್ಯವನ್ನು ಗಳಿಸಲು ಅನುದಿನವೂ ಶ್ರಮಿಸಬೇಕು; ಹೀಗೆ ಪುಣ್ಯವನ್ನು ಸಂಚಯಿಸಿಕೊಳ್ಳುತ್ತಾ ಹೋಗಬೇಕು.

ಅಪಮಾರ್ಗದಲ್ಲಿ ಧನವನ್ನು ಗಳಿಸುವುದು ನಿಷಿದ್ಧ. ಕುಟುಂಬದ, ಬಂಧುಗಳ, ಮಿತ್ರಪರಿವಾರದ ಲಾಭಕ್ಕಾಗಿಯೂ ಹಾಗೆ ಮಾಡಬಾರದು. ದುರ್ಮಾರ್ಗದ ಗಳಿಕೆಯ ಘೋರ ಪರಿಣಾಮಗಳನ್ನು ಅವನೊಬ್ಬನೇ ಅನುಭವಿಸಬೇಕಾಗುತ್ತದೆ. ಜೀವನದಲ್ಲಿ ಧರ್ಮಮಾರ್ಗಕ್ಕೆ ಬದ್ಧನಾಗಿ ನಡೆದವನ ಕೀರ್ತಿ ಅವನು ಮೃತನಾದ ನಂತರವೂ ಉಳಿಯುತ್ತದೆ. ಹೀಗೆ ಧರ್ಮವು ಶಾಶ್ವತ ಸ್ನೇಹಿತನಂತೆ ಇದೆ. ಈ ಮಾರ್ಗದಲ್ಲಿ ಕ್ಲೇಶಗಳೊದಗಿದರೂ ಧರ್ಮದಿಂದ ವಿಮುಖನಾಗಲಿಲ್ಲವೆಂಬ ಸಂತೃಪ್ತಿಯಂತೂ ಇದ್ದೇ ಇರುತ್ತದೆ. ಭಗವದ್ಗೀತೆಯ ಸಂದೇಶವಾದರೂ ಇದೇ:

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।**
**ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವ ರಿಪುರಾತ್ಮನಃ ॥** (೬-೫)

"ವ್ಯಕ್ತಿಯು ಸನ್ಮಾರ್ಗದಿಂದ ತನ್ನ ಉದ್ಧಾರವನ್ನು ತಾನೇ ಸಾಧಿಸಬಲ್ಲ; ಅಥವಾ ದುರ್ಮಾರ್ಗದಿಂದ ತನ್ನ ಅವಸಾನವನ್ನು ತಾನೇ ತಂದುಕೊಳ್ಳಬಲ್ಲ. ಎರಡೂ ಅವನ ಕೈಯಲ್ಲಿಯೇ ಇವೆ. ವ್ಯಕ್ತಿಯು ತನಗೆ ತಾನೇ ಮಿತ್ರನೂ ಆಗಬಲ್ಲ, ಶತ್ರುವೂ ಆಗಬಲ್ಲ."

ಇದು ಸಾರ್ವಕಾಲಿಕ ಸತ್ಯ. ಸತ್ಸಂಸ್ಕಾರವನ್ನು ಗಳಿಸಿ ಸತ್ಕಾರ್ಯಗಳನ್ನು ಮಾಡುವವನು ಉನ್ನತಿ ಪಡೆಯುತ್ತಾನೆ. ಅವನ ಸಚ್ಚಿಂತನೆ ಎಷ್ಟರಮಟ್ಟಿಗೆ ಇರುತ್ತದೋ ಅದಕ್ಕೆ ಅನುಗುಣವಾದ ಪ್ರಮಾಣದಲ್ಲಿ ಅವನ ಉನ್ನತಿ ಆಗುತ್ತದೆ. ಅಂತೆಯೇ ದುಶ್ಚಿಂತನೆ, ದುಷ್ಕಾರ್ಯಗಳಿಗೆ ಅನುಗುಣವಾದ ಪ್ರಮಾಣದಲ್ಲಿ ಅವನ ಅಧಃಪತನವೂ ಸ್ವತಃಸಿದ್ಧ. ವ್ಯಕ್ತಿಗೆ ಇರುವ ಏಕೈಕ ನಿಜವಾದ ಮಿತ್ರನೆಂದರೆ ಧರ್ಮ ಮಾತ್ರ ಎಂಬುದನ್ನು ಮನವರಿಕೆ ಮಾಡಿಕೊಂಡು, ಎಲ್ಲ ಸಂದರ್ಭಗಳಲ್ಲಿಯೂ ವ್ಯಕ್ತಿಯು ಧರ್ಮಕ್ಕೆ ನಿಷ್ಠನಾಗಿರಬೇಕು. ಜೀವನದಲ್ಲಿ ನೆಮ್ಮದಿ ಬೇಕೆನ್ನುವವರಿಗೆ ಇದೊಂದೇ ಏಕೈಕ ಮಾರ್ಗ.

**ಯತೋ ಧರ್ಮಸ್ತತೋ ಜಯಃ – "ಎಂದೆಂದಿಗೂ ಜಯ ದೊರೆಯುವುದು ಧರ್ಮದಿಂದ ಮಾತ್ರ"**

★

## ವಾರ್ತಾ ವಿಶ್ಲೇಷಣೆ

## ಕನ್ನಡಿಗರ ಹೆಮ್ಮೆಯ ಕಂದಮ್ಮಗಳು

ಇತ್ತೀಚೆಗೆ ಎಸ್.ಎಸ್.ಎಲ್.ಸಿ/ ಪಿ.ಯು.ಸಿ ಪರೀಕ್ಷೆಗಳ ಫಲಿತಾಂಶ ಪ್ರಕಟವಾಯಿತು. ಆ ಸಂದರ್ಭದಲ್ಲಿ **'ವಿಜಯಕರ್ನಾಟಕ'** ಪತ್ರಿಕೆಯು **'ಸಮಸ್ತ ಕನ್ನಡಿಗರ ಹೆಮ್ಮೆ'** ಎಂಬ ಶೀರ್ಷಿಕೆಯಲ್ಲಿ, ಆ ಪರೀಕ್ಷೆಗಳಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ಪ್ರತಿಭಾವಂತರ ಪರಿಚಯವನ್ನು ಅವರ ಚಿತ್ರಗಳೊಡನೆ ಪ್ರಕಟಿಸಿತು. ಅವರೆಲ್ಲರೂ ಗ್ರಾಮೀಣ ಪ್ರದೇಶದ ಸರಕಾರಿ ಶಾಲಾ ಕಾಲೇಜುಗಳಲ್ಲಿ ಓದಿದವರು. ಅವರ ತಂದೆತಾಯಿಗಳು ಕಡುಬಡವರು; ಕೂಲಿನಾಲಿ ಮಾಡಿ ಮಕ್ಕಳನ್ನು ಓದಿಸಿದ್ದರು. ಆದರೆ ಆ ವಿದ್ಯಾರ್ಥಿಗಳದ್ದು ತ್ರಿವಿಕ್ರಮ ಛಲ ಮತ್ತು ಅದಮ್ಯ ಸಂಕಲ್ಪ. ತಾಳಿಕೋಟೆಯ ಬಸಯ್ಯ ಮಠ ಫಕೀರಯ್ಯ ಕಲಾವಿಭಾಗದಲ್ಲಿ ಮೊದಲ ಸ್ಥಾನ ಪಡೆದನು. ಅವನು ಕೂಲಿ ಮಾಡಿ, ವೃತ್ತಪತ್ರಿಕೆಗಳನ್ನು ಹಂಚಿ, ಹಾಲು ಮಾರಿ ಓದಿದವನು. ಪಿ.ಯು.ಸಿ. ಪ್ರವೇಶ ಶುಲ್ಕ ರೂ. ೨೦೦೦ ಅನ್ನು ಹೊಂದಿಸಲು ಈತ ಹೊಲಗಳಲ್ಲಿ ಕೂಲಿ ಮಾಡಿದ. ತುಮಕೂರಿನ ಜಿ.ಯಶೋದಾ ಕಲಾವಿಭಾಗದಲ್ಲಿ ಜಿಲ್ಲೆಗೇ ಪ್ರಥಮ ಸ್ಥಾನ ಗಳಿಸಿದ್ದಾಳೆ. ಅವರ ಪೋಷಕರು ಅನಕ್ಷರಸ್ಥರು. ಅವಳಿಗೆ ೧೦ನೆಯ ತರಗತಿಯಲ್ಲಿಯೂ ಶೇ. ೮೦ ಅಂಕಗಳು ಬಂದಿದ್ದವು. ಆದರೆ ಹಣದ ಅಭಾವದಿಂದ ಕಲಾವಿಭಾಗವನ್ನು ಆಯ್ಕೆ ಮಾಡಿಕೊಂಡಳು. ಬೆಂಗಳೂರಿನ ಆವಲಹಳ್ಳಿಯ ಮಹಾಲಕ್ಷ್ಮಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. ೯೦ ಅಂಕಗಳು ಬಂದಿವೆ. ಈಕೆಗೆ ತಂದೆ ಇಲ್ಲ. ತಾಯಿ ಗಾರ್ಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ. ಅವರ ಅಜ್ಜಿ ಅಕ್ಕಪಕ್ಕದ ಮನೆಗಳಲ್ಲಿ ಮನೆಗೆಲಸ ಮಾಡಿ ಪುಡಿಗಾಸು ಸಂಪಾದಿಸುತ್ತಾರೆ. ಈ ಹುಡುಗಿಯೂ ಹೂವು ಪೋಣಿಸಿ, ಬೀದಿಯಲ್ಲಿ ಮಾರಾಟ ಮಾಡಿ, ಒಂದಿಷ್ಟು ಕಾಸು ಸಂಪಾದಿಸಿ, ಮನೆಗೆ ನೆರವಾಗುತ್ತಾಳೆ. ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ಮೊದಲ ಸ್ಥಾನ ಪಡೆದ ರಶ್ಮಿ ಪಾಟೀಲ್ ಇಳಕಲ್ ಗ್ರಾಮದವಳು; ಮೂಡುಬಿದಿರಿಯ ಆಳ್ವಾಸ್ ಕಾಲೇಜಿನಲ್ಲಿ ಅಧ್ಯಯನ ಮಾಡಿದ್ದಾಳೆ. ಅದಕ್ಕೇ ಒಬ್ಬ ಸಂಸ್ಕೃತ ಸುಭಾಷಿತಕಾರ ಹೀಗೆ ಹೇಳುತ್ತಾನೆ: **ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ** – ಯಾವುದೇ ಕೆಲಸದ ಸಿದ್ಧಿಯು ವ್ಯಕ್ತಿಯೊಬ್ಬನ ಅಂತಸ್ಸತ್ವದಿಂದ ಆಗುತ್ತದೆಯೇ ಹೊರತು, ಕೇವಲ ಬಾಹ್ಯ ಉಪಕರಣಗಳಿಂದ ಅಲ್ಲ. ವರ್ಷವಿಡೀ ಕೋಚಿಂಗ್ ಕ್ಲಾಸ್‌ಗೆ ಹೋಗಿ, ಜಾಸ್ತಿ ಅಂಕ ಪಡೆಯುವುದು ಹೆಚ್ಚುಗಾರಿಕೆಯ ಮಾತಲ್ಲ. ಅಂಥ ವಿದ್ಯಾರ್ಥಿಗಳನ್ನು ನಾಚಿಸುವಂಥ ಸಾಧನೆಯನ್ನು ಮಾಡಿದ ಈ ಸಾಮಾನ್ಯ ವಿದ್ಯಾರ್ಥಿಗಳು ನಿಜಕ್ಕೂ ಅಸಾಮಾನ್ಯರಲ್ಲವೇ? ನೀವೇ ಹೇಳಿ.

★